# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ – ೪ಎ<br>**Part – IVA** | ಬೆಂಗಳೂರು, ಶುಕ್ರವಾರ,೨೯,ಜನವರಿ, ೨೦೨೧(ಮಾಘ, ೦೯, ಶಕವರ್ಷ ೧೯೪೨)<br>**Bengaluru, FRIDAY,29,JANUARY,2021( MAGHA,09, ShakaVarsha 1942)** | ನಂ. ೧೪೫<br>**No. 145** |


**KARNATAKA LEGISLATIVE ASSEMBLY**

**FIFTEENTH LEGISLATIVE ASSEMBLY**

**NINTH SESSION**

## THE KARNATAKA EPIDEMIC DISEASES (AMENDMENT) BILL, 2020
## (LA Bill No. 03 of 2021)

A Bill to amend the Karnataka Epidemic Diseases Act, 2020.

Whereas it is expedient to amend the Karnataka Epidemic Diseases Act, 2020 (Karnataka Act 26 of 2020) for the purposes hereinafter appearing;

Be it enacted by the Karnataka State Legislature in the seventy first year of the Republic of India, as follows:-

**1. Short title and commencement.-** (1) This Act may be called the Karnataka Epidemic Diseases (Amendment) Act, 2020.

(2) It shall come into force at once.

**2. Amendment of section 5.-** In the Karnataka Epidemic Diseases Act, 2020 (Karnataka Act 26 of 2020) (hereinafter referred to as the Principal Act), in section 5,-

(i) after sub-section (3), the following shall be inserted, namely:-

"(3A) whoever contravenes the provisions of sub-section (1) shall be punished with such fine as may be prescribed in rules or in regulations, which

may extend to fifty thousand rupees or with imprisonment for a term which may extend up to three months or with both.”

(ii) in sub-section (4), the figure and brackets “(1)” shall be omitted.

**3. Substitution of section 10.-** For section 10 of the Principal Act, the following shall be substituted, namely:-

“**10. Composition of certain offences.-** (1) Any offence punishable under the provisions of sub-section (3A) of section 5 committed before or after commencement of the Karnataka Epidemic Diseases (Amendment) Act, 2020 may either before or after institution of prosecution be compounded by such officer authorised by the Government, on payment of such amount as may be notified by the Government. On such compounding, an offender, if in custody shall be discharged and no further proceedings shall be taken against him in respect of such offence.

(2) Any offence punishable under sub-section (4) of section 5, committed before or after the commencement of the Karnataka Epidemic Diseases (Amendment) Act, 2020 may be compounded with permission of the court, by a person against whom such act of violence is committed.”

## STATEMENT OF OBJECTS AND REASONS

It is considered necessary to amend the Karnataka Epidemic Diseases Act, 2020 (Karnataka Act 26 of 2020) to make provisions for imposition of penalty for contravention of rules and regulations made under the Act and for compounding of such offences.

Hence, the Bill.

## FINANCIAL MEMORANDUM

There is no extra expenditure involved in the proposed Legislative measure.

## MEMORANDUM REGARDING DELEGATED LEGISLATION

**Clause 2:** Sub-section (3A) of section 5 sought to be inserted by clause 2, empowers the State Government to make rules regarding punishment for contravention of provisions of sub-section (1) of section 5.

The proposed delegation of legislative power is normal in character.

**K. SUDHAKAR**

Minister for Health and Family Welfare

and Medical education

**M.K. VISHALAKSHI**
Secretary (I/c)
Karnataka Legislative Assembly

**ANNEXURE**

**Extract from the Karnataka Epidemic Diseases Act, 2020**
**(Karnataka Act 26 of 2020)**

**XX XX XX**

**5. Prohibition of Contravention or obstruction of Public Servant**.- (1) No person, institution or company shall contravene or disobey any of the provisions of section 4, rules, regulation or order made under this Act.

(2) No person shall obstruct any officer or any public servant while acting or purporting to act or discharging any duty in pursuance to any provisions of this Act, rules, regulations or orders made there under.

(3) No person shall indulge in any act of violence against a public servant or cause any damage or loss to any public or private property during an epidemic.

(4) Whoever contravenes any of the provisions of sub-section (1), (2) or (3) shall on conviction be punished with imprisonment for a term which shall not be less than three months, but which may extend to five years and with fine, which shall not be less than fifty thousand rupees, but which may extend to two lakh rupees.

(5) Whoever, while committing an act of violence against a public servant, causes grievous hurt as defined in section 320 of Indian Penal Code, 1860 (Central Act 45 of 1860) to such person, shall be punished with imprisonment for a term which shall not be less than six months, but which may extend to seven years and with fine, which shall not be less than one lakh rupees, but which may extend to five lakh rupees.

**XX XX XX**

**10. Composition of certain offences.-** Where a person is prosecuted for committing an offence punishable under sub-section (3) of section 5, such offence may, with the permission of the Court, be compounded by the person against whom such act of violence is committed.

**XX XX XX**

**ಕರ್ನಾಟಕ ವಿಧಾನಸಭೆ**
**ಹದಿನೈದನೇ ವಿಧಾನಸಭೆ**
**ಒಂಭತ್ತನೇ ಅಧಿವೇಶನ**

# ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ವಿಧೇಯಕ, 2020

**(2021ರ ವಿಧಾನಸಭೆಯ ವಿಧೇಯಕ ಸಂಖ್ಯೆ–03)**

ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ, 2020ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ, 2020ನ್ನು (2020ರ ಕರ್ನಾಟಕ ಅಧಿನಿಯಮ 26) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 5ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 26) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 5ನೇ ಪ್ರಕರಣದಲ್ಲಿ,-

(i) (3)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

"(3ಎ) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲಂಘಿಸುವ ಯಾರೊಬ್ಬನನ್ನು ನಿಯಮಗಳಲ್ಲಿ ಅಥವಾ ವಿನಿಯಮಗಳಲ್ಲಿ ನಿಯಮಿಸಬಹುದಾದಂತೆ, ಐವತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಅಂಥ ಜುಲ್ಮಾನೆಯಿಂದ ಅಥವಾ ಮೂರು ತಿಂಗಳವರೆಗೆ ಅವಧಿಗಾಗಿ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು."

(ii) (4)ನೇ ಉಪಪ್ರಕರಣದಲ್ಲಿ, "(1)" ಎಂಬ ಆವರಣ ಚಿಹ್ನೆಗಳು ಮತ್ತು ಅಂಕಿಯನ್ನು ಬಿಟ್ಟುಬಿಡತಕ್ಕದ್ದು.

**3.10ನೇ ಪ್ರಕರಣದ ಪ್ರತಿಯೋಜನೆ.-** ಮೂಲ ಅಧಿನಿಯಮದ 10ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"10. ಕೆಲವು ಅಪರಾಧಗಳ ರಾಜಿ.-** ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ಅಧಿನಿಯಮ, 2020ರ (2020ರ ಕರ್ನಾಟಕ ಅಧಿನಿಯಮ 26) ಪ್ರಾರಂಭಕ್ಕೆ ಮೊದಲು ಅಥವಾ ತರುವಾಯ, 5ನೇ ಪ್ರಕರಣದ (3ಎ) ಉಪಪ್ರಕರಣದ ಅಡಿಯಲ್ಲಿ ದಂಡನೀಯವಾದ

ಅಪರಾಧವನ್ನು ಎಸಗಿದ್ದು, ಪ್ರಾರಂಭಿಸುವುದಕ್ಕೆ ಮೊದಲಾಗಲೀ ಅಥವಾ ತರುವಾಯವಾಗಲೀ, ಸರ್ಕಾರವು ಅಧಿಸೂಚಿಸಿದ ಅಂಥ ಮೊತ್ತವನ್ನು ಪಾವತಿಸಿದ ಮೇರೆಗೆ, ಸರ್ಕಾರವು ಪ್ರಾಧಿಕೃತಗೊಳಿಸಿದಂಥ ಅಧಿಕಾರಿಯು, ರಾಜಿ ಮಾಡಬಹುದು. ಅಂಥ ರಾಜಿಯಾದಾಗ, ಅಪರಾಧಿಯು ವಶದಲ್ಲಿದ್ದಲ್ಲಿ ಆತನನ್ನು ಬಿಡುಗಡೆಗೊಳಿಸತಕ್ಕದ್ದು ಮತ್ತು ಅಂಥ ಅಪರಾಧದ ಸಂಬಂಧದಲ್ಲಿ ಆತನ ವಿರುದ್ಧ ಯಾವುದೇ ಮುಂದಿನ ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ.

(2) 5ನೇ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು, ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ಅಧಿನಿಯಮ, 2020ರ ಪ್ರಾರಂಭಕ್ಕೆ ಮೊದಲು ಅಥವಾ ತರುವಾಯ, ನ್ಯಾಯಾಲಯದ ಅನುಮತಿಯೊಂದಿಗೆ, ಅಂಥ ಹಿಂಸಾಕೃತ್ಯವು ಯಾರ ಮೇಲಾಗಿದೆಯೋ ಆ ವ್ಯಕ್ತಿಯ ಮೂಲಕ ರಾಜಿ ಮಾಡಬಹುದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಅಧಿನಿಯಮದ ಅಡಿಯಲ್ಲಿ ಮಾಡಲಾದ ನಿಯಮಗಳು ಮತ್ತು ವಿನಿಯಮಗಳ ಉಲಂಘನೆಗಾಗಿ ದಂಡವನ್ನು ವಿಧಿಸುವುದಕ್ಕಾಗಿ ಮತ್ತು ಅಂಥ ಅಪರಾಧಗಳ ರಾಜಿಗಾಗಿ ಉಪಬಂಧಗಳನ್ನು ಕಲ್ಪಿಸಲು ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ, 2020ನ್ನು (2020ರ ಕರ್ನಾಟಕ ಅಧಿನಿಯಮ 26) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತ ಜ್ಞಾಪನಪತ್ರ

| | |
|---|---|
| **ಖಂಡ 2 :** | 5ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಿರುವ 5ನೇ ಪ್ರಕರಣದ (3ಎ) ಉಪಪ್ರಕರಣವು, 5ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳ ಉಲಂಘನೆಗಾಗಿ ದಂಡನೆಯ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಕೆ. ಸುಧಾಕರ್**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



## ಅನುಬಂಧ
## ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ, 2020ರ
## (2020ರ ಕರ್ನಾಟಕ ಅಧಿನಿಯಮ 26) ಉದ್ಧೃತ ಭಾಗ

**Xxx xxx xxx**

**5. ಉಲ್ಲಂಘನೆ ಅಥವಾ ಸಾರ್ವಜನಿಕ ನೌಕರನಿಗೆ ಅಡಚಣೆ ಮಾಡುವುದಕ್ಕೆ ನಿಷೇಧ.-** (1) ಯಾವೊಬ್ಬ ವ್ಯಕ್ತಿ, ಸಂಸ್ಥೆ ಅಥವಾ ಕಂಪನಿಯು 4ನೇ ಪ್ರಕರಣದ ಯಾವುದೇ ಉಪಬಂಧಗಳನ್ನು, ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ನಿಯಮಗಳು, ವಿನಿಯಮ ಅಥವಾ ಆದೇಶವನ್ನು ಉಲ್ಲಂಘಿಸತಕ್ಕದ್ದಲ್ಲ ಅಥವಾ ಅವಿಧೇಯತೆಯನ್ನು ತೋರಿಸತಕ್ಕದ್ದಲ್ಲ (disobey).

(2) ಈ ಅಧಿನಿಯಮದ ಅಥವಾ ಅದರಡಿಯಲ್ಲಿ ಮಾಡಲಾದ ನಿಯಮಗಳು, ವಿನಿಯಮಗಳು ಅಥವಾ ಆದೇಶಗಳ ಯಾವುದೇ ಉಪಬಂಧಗಳ ಅನುಸರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಥವಾ ಕಾರ್ಯನಿರ್ವಹಿಸುತ್ತಿರುವನೆಂದು ತಾತ್ಪರ್ಯವಾಗುವ ಅಥವಾ ಕರ್ತವ್ಯವನ್ನು ನಿರ್ವಹಿಸುತ್ತಿರುವ ಯಾವೊಬ್ಬ ಅಧಿಕಾರಿ ಅಥವಾ ಯಾವೊಬ್ಬ ಸಾರ್ವಜನಿಕ ನೌಕರನಿಗೆ ಯಾವೊಬ್ಬ ವ್ಯಕ್ತಿಯು ಅಡಚಣೆಯನ್ನು ಮಾಡತಕ್ಕದ್ದಲ್ಲ.

(3) ಸಾಂಕ್ರಾಮಿಕ ರೋಗವು ಹರಡಿರುವ ಅವಧಿಯಲ್ಲಿ ಸಾರ್ವಜನಿಕ ನೌಕರನ ವಿರುದ್ಧ ಹಿಂಸಾಚಾರ ಕೃತ್ಯವನ್ನು ಎಸಗುವಲ್ಲಿ ಅಥವಾ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ವತ್ತಿಗೆ ನಷ್ಟ ಉಂಟುಮಾಡುವಲ್ಲಿ ಯಾವೊಬ್ಬ ವ್ಯಕ್ತಿಯು ತೊಡಗತಕ್ಕದ್ದಲ್ಲ.

(4) (1), (2) ಅಥವಾ (3)ನೇ ಉಪಪ್ರಕರಣದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬನು, ಅಪರಾಧ ನಿರ್ಣಯವಾದಮೇಲೆ, ಮೂರು ತಿಂಗಳಿಗೆ ಕಡಿಮೆಯಲ್ಲದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದೊಂದಿಗೆ ಮತ್ತು ಐವತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಎರಡು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

(5) ಯಾವೊಬ್ಬನು, ಸಾರ್ವಜನಿಕ ನೌಕರನ ವಿರುದ್ಧ ಹಿಂಸಾ ಕೃತ್ಯವನ್ನು ಎಸಗುವಾಗ, ಭಾರತೀಯ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ 45) 320ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ತೀವ್ರತರವಾದ ಹಾನಿಯುಂಟುಮಾಡಿದ್ದಲ್ಲಿ, ಅಂಥ ವ್ಯಕ್ತಿಯು, ಆರು ತಿಂಗಳಿಗೆ ಕಡಿಮೆಯಲ್ಲದ ಆದರೆ ಏಳು ವರ್ಷಗಳ ಅವಧಿಗೆ ವಿಸ್ತರಿಸಬಹುದಾದ ಕಾರಾವಾಸದೊಂದಿಗೆ ಮತ್ತು ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಐದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

**Xxx xxx xxx**

**10. ಕೆಲವು ಅಪರಾಧಗಳ ಸಂಯೋಜನೆ.-** 5ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿರುವುದಕ್ಕಾಗಿ ಯಾವೊಬ್ಬ ವ್ಯಕ್ತಿಯು ಅಭಿಯೋಜನೆಗೆ ಒಳಗಾದರೆ, ಅಂಥ ಅಪರಾಧವನ್ನು, ಅಂಥ ಹಿಂಸಾ ಕೃತ್ಯ ಎಸಗಿದ ವ್ಯಕ್ತಿಯ ವಿರುದ್ಧ ನ್ಯಾಯಾಲಯದ ಅನುಮತಿಯೊಂದಿಗೆ ಸಂಯೋಜಿಸಬಹುದು.

**Xxx xxx xxx**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL GARDE Digitally signed by SUNIL GARDE Date: 2021.02.01 15:32:02 +05'30'